ಶ್ರೀ ಸಿ. ಟಿ. ಹನುಮಂತಯ್ಯ.—(ಎ) ಪ್ರಶ್ನೆಯಲ್ಲಿ ಕೇಳಿರತಕ್ಕ ಜಂಗಮರಹಳ್ಳಿ ಕೆರೆ ಒಡೆದುಹೋಗಿ ಎಷ್ಟು ವರ್ಷಗಳಾಯಿತು ಎಂಬ ಅಂತ ಸರ್ಕಾರದವರ ಗಮನಕ್ಕೆ ಬಂದಿದೆಯೇ?

ಶ್ರೀ ಎಚ್. ಸಿದ್ದವೀರಪ್ಪ.—ನೋಟೀಸ್.

ಶ್ರೀ ಸಿ. ಟಿ. ಹನುಮಂತಯ್ಯ.—ಈ ವಿಚಾರದಲ್ಲಿ ಮೈಸೂರು ಮತ್ತು ಮದ್ರಾಸ್ ಸರ್ಕಾರಗಳಿಗೆ ಏನೂ ಒಪ್ಪಂದಗಳು ನಡೆದಿಲ್ಲವೇ?

Sri H. SIDDAVEERAPPA.—That information is not readily available.

Enquiry held against Sri V. Nanjappa by the Anti-Corruption Department.

Q.—197. Sri K. G. THIMME GOWDA (Kanakapura).—

Will the Government be pleased to state:—

(*a*) whether an enquiry was held against Sri V. Nanjappa of Agricultural Department (now in suspension) by the Anti-Corruption Department;

(*b*) the date on which the enquiry commenced;

(*c*) whether the Anti-Corruption Department submitted its report to Government;

(*d*) if so, the action, if any, Government has taken on the report?

A.—Sri H. SIDDAVEERAPPA (Minister for Home and Industries) [on behalf of Sri KADIDAL MANJAPPA (Minister for Revenue and Public Works)].—

(*a*) Yes.

(*b*) The regular enquiry in the case was commenced on 3rd July 1952.

(*c*) Yes.

(*d*) It is under consideration.

ಶ್ರೀ ಕೆ. ಜಿ. ತಿಮ್ಮೇಗೌಡ.—(ಬಿ) ಪ್ರಶ್ನೆಗೆ ಉತ್ತರವಾಗಿ 3-7-1952ರಲ್ಲಿ ಕ್ರಮವಾದ ವಿಚಾರಣೆ ಪ್ರಾರಂಭವಾಯಿತೆಂದು ಹೇಳಿದ್ದೀರಿ. ಅಂಥ ಇರ್ರೆಗ್ಯುಲರ್ ಎಕ್ಸ್‌ಪೈರಿ ಯಾವಾಗ ಶುರುವಾಗಿತ್ತು?

ಶ್ರೀ ಎಚ್. ಸಿದ್ದವೀರಪ್ಪ.—ಇರ್ರೆಗ್ಯುಲರ್ ಎಕ್ಸ್‌ಪೈರಿ ಮಾಡತಕ್ಕ ಪದ್ಧತಿ ಮೈಸೂರು ಸರ್ಕಾರದಲ್ಲಿ ಇಲ್ಲ.

ಶ್ರೀ ಕೆ. ಜಿ. ತಿಮ್ಮೇಗೌಡ.—ಇಲ್ಲ ನಾನು ಕೇಳಿರತಕ್ಕ ಪ್ರಶ್ನೆ ನ್ಪಷ್ಪವಾಗಿದೆ. ಆದರೂ .....

Sri H. SIDDAVEERAPPA.—There are two kinds of enquiries.

Sri K. G. THIMME GOWDA.—What are those two kinds of enquiries?

Sri H. SIDDAVEERAPPA.—Formal enquiry and then regular enquiry.

ಶ್ರೀ ಕೆ. ಜಿ. ತಿಮ್ಮೇಗೌಡ.—ಈ ಫಾರ್ಮಲ್ ಎಕ್ಸ್‌ಪೈರಿ ಯಾವಾಗ ಶುರುವಾಯಿತು?

Sri H. SIDDAVEERAPPA.—I have not got the date with me. It must have begun as soon as the petition was received. That is, as the Hon'ble Member is aware, preliminary enquiry. After preliminary enquiry is made .....

Sri K. G. THIMME GOWDA.—I want to know only when it began?

Sri H. SIDDAVEERAPPA.—Notice.

ಶ್ರೀ ಕೆ. ಜಿ. ತಿಮ್ಮೇಗೌಡ.—ಅವರು ಕೋರ್ಟಿನಲ್ಲಿ ಸಾಕ್ಷಿ ಹೇಳುವಾಗ ಅವರ ವಿಚಾರಣೆಯೇ ಆಗಲಿಲ್ಲ ವೆಂದು ಹೇಳಿಕೆ ಕೊಟ್ಟಿರುವುದು ತಮ್ಮ ಅವಗಾಹನೆಗೆ ಬಂದಿದೆಯೇ?

Sri H. SIDDAVEERAPPA.—That does not arise out of this question.

Sri K. G. THIMME GOWDA.—I want to know whether it is true.

Sri H. SIDDAVEERAPPA.—It has not come to my notice.

ಶ್ರೀ ಕೆ. ಜಿ. ತಿಮ್ಮೇಗೌಡ.—ಈಗ ಆಂಟಿ-ಕರಪ್ಷನ್ ಇರಾಖಾ ಮೊಖ್ತೇನರು ಯಾರು?

Mr. SPEAKER.—That question does not arise.

Sharing the cost of Tungabhadra Project among Mysore, Madras, Andhra and Hyderabad States.

Q.—265. Sri A. V. NARASIMHA REDDY (Bangalore South).—

Will the Government be pleased to state:—

(*a*) whether there were talks at Delhi on the question of sharing the cost of Tungabhadra Project among Mysore, Madras, Andhra and Hyderabad States;

(*b*) if so, whether any decision has been taken and what is the liability to be shared by Mysore State?

A.—Sri H. SIDDAVEERAPPA (Minister for Home and Industries) [on behalf of Sri KADIDAL MANJAPPA (Minister for Revenue and Public Works)].—

(*a*) No.

(*b*) Does not arise.

ಶ್ರೀ ಎ. ವಿ. ನರಸಿಂಹರೆಡ್ಡಿ.—ತಾವು (ಎ) ಪ್ರಶ್ನೆಗೆ ಉತ್ತರವಾಗಿ ಡೆಲ್ಲಯಲ್ಲ ಮಾತುಕತೆಗಳು ನಡೆಯಲಿಲ್ಲ ವೆಂದು ಹೇಳಿದ್ದೀರಿ, ಹಾಗಾದರೆ ಆ ಮಾತು ಕತೆಗಳು ಅಥವಾ ಪತ್ರವ್ಯವಹಾರಗಳು ಮತ್ತೆರ್ನಾದರೂ ನಡೆದವೇ ?

ಶ್ರೀ ಎಚ್. ಸಿದ್ದವೀರಪ್ಪ.—ಇಲ್ಲ.

Sri S. GOPALA GOWDA.—The Chair has not taken the consent of the House for continuing the question hour.

Mr. SPEAKER.—With the consent of the House, I am going on. If the House is not inclined, I will stop the question-hour.

Sri S. GOPALA GOWDA.—The House is not willing.

MEMBERS.—The House is willing to continue questions.

ಶ್ರೀ ಎ. ವಿ. ನರಸಿಂಹರೆಡ್ಡಿ.—ಮೈಸೂರು ಸಂಸ್ಥಾನಕ್ಕೆ ಇದರಿಂದ ಎಷ್ಟು ಲಯಬಿಲಿಟಿಯಾಗುತ್ತದೆಂಬುದನ್ನು ತಿಳಿಸುತ್ತೀರಾ ?

Sri H. SIDDAVEERAPPA.—That is again a matter for decision. Decision has not yet been taken.

ಶ್ರೀ ಎ. ವಿ. ನರಸಿಂಹರೆಡ್ಡಿ.—Financial liability ಯನ್ನಾದರೂ ಎಷ್ಟಾಗುತ್ತದೆಂಬುದನ್ನು ತಿಳಿಸುವಿರಾ ?

ಶ್ರೀ ಎಚ್. ಸಿದ್ದವೀರಪ್ಪ.—ಆ ಪ್ರಶ್ನೆಯೇ ಇನ್ನೂ ತೀರ್ಮಾನವಾಗಿಲ್ಲ. ನಮ್ಮ ಪಿತ್ರರಾದ ಮಾನ್ಯರೆವೆನ್ಯೂ ಸಚಿವರು ಡೆಲ್ಲಿಗೆ ಹೋಗಿ ಈ ಸಂಬಂಧದಲ್ಲಿ ಎರಡಾವರ್ತಿ ಮಾತುಕತೆಗಳನ್ನಾಡಿಕೊಂಡು ಬಂದಿದ್ದಾರೆ. ಆದರೆ ಈ ಸಂಬಂಧವಾಗ್ಗಿ ಯಾವುದೂ ಇನ್ನೂ ಆಖೈರಾಗಿ ತೀರ್ಮಾನವಾಗಿಲ್ಲ.

ಶ್ರೀ ಮುಲ್ಕ ಗೋವಿಂದರೆಡ್ಡಿ.—ಬಳ್ಳಾರಿ ಮತ್ತು ಇತರ ಆರು ತಾಲ್ಲೂಕುಗಳಲ್ಲಿಯೂ ಆ ತುಂಗಭದ್ರ ಪ್ರಾಜೆಕ್ಟಿನಿಂದ ಎಷ್ಟು ಭೂಮಿ ನೀರಾವರಿಯಾಗುತ್ತದೆ?

ಶ್ರೀ ಎಚ್. ಸಿದ್ದವೀರಪ್ಪ.—ಇನ್ನೂ ಹೈಲೆವರ್ ಧಾನರ್ ಆಗಬೇಕಾಗಿದೆ. ನಮಗೆ ಆ ಬಳ್ಳಾರಿ ಮತ್ತು ಇತರ ತಾಲ್ಲೂಕುಗಳು ಬಂದವೆಲೆ ಆ ವಿಚಾರವೆಲ್ಲ ಗೊತ್ತಾಗುತ್ತದೆ.

ಶ್ರೀ ಮುಲ್ಕ ಗೋವಿಂದರೆಡ್ಡಿ.—ಮೈಸೂರು ಸರ್ಕಾರದವರು ಈ ಬಗ್ಗೆ 8 ಕೋಟಿ ರೂಪಾಯಿಗಳನ್ನು ಕೊಡಬೇಕೆಂದು ಅವರು ಕೇಳುತ್ತಿಲ್ಲವೇ ?

Sri H. SIDDAVEERAPPA.—Those are yet in the stage of correspondence.

1-30 P.M.

Breeding Bulls in Veterinary Hospitals in Shimoga District.

Q.—181. Sri S. R. NAGAPPA SETTY (Shimoga).—

Will the Government be pleased to state :—

(*a*) the number of Veterinary Hospitals where breeding bulls are maintained in Shimoga District ;

(*b*) since how many years the Shimoga Town Veterinary Hospital is without a breeding bull ;

(*c*) whether breeding bulls have been kept with any private persons in Shimoga Town with the aid of Government and if so, with how many persons ;

(*d*) the number of useless scrub-bulls which have been castrated in Shimoga ;

(*e*) the number of breeding bulls that have been retained in Shimoga Town on the recommendation of the department ?

A.—Sri H. SIDDAVEERAPPA (Minister for Home and Industries).—

(*a*) Nil.

(*b*) Three years.

(*c*) No bulls are maintained by private persons with Government aid in Shimoga Town.

(*d*) 763.

(*e*) One.

ಶ್ರೀ ಎಸ್. ಆರ್. ನಾಗಪ್ಪಶೆಟ್ಟಿ.—ಶಿವಮೊಗ್ಗಟೌನಿನಲ್ಲಿ ಒಂದೇ ಒಂದು ಹೋರಿಯಿದೆಯೆಂದು ಹೇಳಿದ್ದೀರಿ. ಇದು ಯಾರ ಹತ್ತಿರ ಇದೆಯೆಂದು ಹೇಳುತ್ತೀರಾ ?

ಶ್ರೀ ಎಚ್. ಸಿದ್ದವೀರಪ್ಪ.—ಶ್ರೀನಿವಾಸರಾವ್ ಎಂಬ ಅಡ್ವೋಕೇಟರ ಹತ್ತಿರ ಇದೆ.

ಶ್ರೀ ಎಸ್. ಆರ್. ನಾಗಪ್ಪಶೆಟ್ಟಿ.—ಶಿವಮೊಗ್ಗ ನಗರದ ಆಸ್ಪತ್ರೆಯಲ್ಲಿ ಹೋಗಿ ಹೋರಿಯಿದೆಯೇ ಎಂದು ವಿಚಾರಿಸಿದರೆ ಆಸ್ಪತ್ರೆಯಲ್ಲಿ ಇಟ್ಟಿಲ್ಲ ಎಂದು ಹೇಳುತ್ತಿರುವುದು ತಮ್ಮ ಗಮನಕ್ಕೆ ಬಂದಿದೆಯೇ ?

ಶ್ರೀ ಎಚ್. ಸಿದ್ದವೀರಪ್ಪ.—ಸರ್ಕಾರದ ಸ್ಕೀಮು ಈಚೆಗೆ ಬದಲಾವಣೆಯಾಗಿವೆ. 1945ರ ಹಿಂದೆ ಒಂದು ರೀತಿಯಿತ್ತು. ಆಸ್ಪತ್ರೆಯಲ್ಲಿ ಹೋರಿಗಳನ್ನು maintain ಮಾಡುತ್ತಿದ್ದುದನ್ನು ತಪ್ಪಿಸಿ ರೈತರೇ maintain ಮಾಡಬೇಕೆಂದು ಮಾಡಿದೆ. ಅದಕ್ಕನುಗುಣವಾಗಿ ಯಾವ ಆಸ್ಪತ್ರೆಯಲ್ಲೂ ಬೇಜದ ಹೋರಿಗಳನ್ನಿಟ್ಟಿಲ್ಲ. ಅದಕ್ಕೆ ಬದಲು ಅಲ್ಲೇ ರೈತರು ಯಾರು ಹೋರಿಗಳನ್ನಿಟ್ಟುಕೊಳ್ಳುತ್ತೇವೆಂದು ಮುಂದೆ ಬರುತ್ತಾರೋ ಅವರಿಗೆ ಸರ್ಕಾರದವರು ಸಹಾಯ ಮಾಡುತ್ತಾರೆ. ಶಿವಮೊಗ್ಗದಲ್ಲಿ ಹೋರಿ ಇಡದೇ ಹೋದರೂ ಹತ್ತಿರದಲ್ಲಿ ಒಂದು ಮೈಲಿ, ಎರಡು ಮೈಲಿಗಳ ದೂರದಲ್ಲಿ ಬಲವಾದ ಹೋರಿಗಳನ್ನು ರೈತರು ಇಟ್ಟುಕೊಂಡಿದ್ದಾರೆ.

ಶ್ರೀ ಎಸ್. ಆರ್. ನಾಗಪ್ಪಶೆಟ್ಟಿ.—ಅಲ್ಲಿನ ಆಸ್ಪತ್ರೆಯಲ್ಲಿ ಒಂದು artificial insemination centre ನ್ನಾದರೂ ಮಾಡುವುದಕ್ಕೆ ಏರ್ಪಾಡು ಮಾಡುತ್ತೀರಾ ?

ಶ್ರೀ ಎಚ್. ಸಿದ್ದವೀರಪ್ಪ.—ಶಿವಮೊಗ್ಗ ಜಿಲ್ಲೆಯಲ್ಲಿ ಒಂದು ಸೆಂಟರನ್ನು ಏರ್ಪಡಿಸುವುದನ್ನು ಯೋಚನೆ ಮಾಡುತ್ತೇವೆ.

ಶ್ರೀ ಜೆ ಮಹಮ್ಮದ್ ಇಮಾಂ.—Scrub Bulls Castration Bill ನ್ನು ಮಂಡಿಸುವಾಗ ಎಲ್ಲೆಲ್ಲ ಬ್ರೀಡಿಂಗ್ ಬುಲ್ಸ್‌ಗಳು ಬೇಕೋ ಅಲ್ಲಿ ಹೋರಿಗಳನ್ನು ಒದಗಿಸುವುದನ್ನು ಯೋಜನೆ ಮಾಡುತ್ತೇವೆಂದು ತಾವು ಭರವಸೆ ಕೊಡಲಿಲ್ಲವೇ ?